ಹೇಳಿದ್ದೇವೆ, ಎಂದರೆ ಏನು ರೂ. 45 ಲಕ್ಷಗಳ ಯೋಜನೆ ಅನುಮೋದನೆಗೆ ಬಂದಿದೆ, ಅದಕ್ಕೆ ಅನುಮೋದನೆ ಕೊಟ್ಟು, ದುಡ್ಡನ್ನು ಕೊಟ್ಟರೆ ಈ ಕೆಲಸವಾಗುತ್ತದೆ. ಇಲ್ಲವೆಂದರೆ, ಮುಂಚೆ ರೂ. 35 ಲಕ್ಷ ಹಾಕಿದ್ದು ಹೋಗುತ್ತದೆ. ಈ ರೂ. 3 ಲಕ್ಷದಲ್ಲಿ ಏನು ಕೆಲಸವನ್ನೂ ಮಾಡಲಾಗುವುದಿಲ್ಲ. ಈ ಬಗ್ಗೆ ತಮಗೆ ಸಾಕಷ್ಟು ಪತ್ರಗಳನ್ನು ಬರೆದಿದ್ದೇನೆ, ತಮ್ಮ ಹತ್ತಿರವೂ ನಾನು ವಿಶೇಷವಾಗಿ ಮಾತನಾಡಿದ್ದೇನೆ. 2003 ರಲ್ಲಿ ಕಾಮಗಾರಿ ಪ್ರಾರಂಭವಾಗಿದೆ, ಈಗ 2007, ಈಗೇನು ನಾವು ತಾತ್ಕಾಲಿಕವಾಗಿ ಬಿಲ್ಡಿಂಗ್ ತೆಗೆದುಕೊಂಡಿದ್ದೆವು, ಮಳೆಯಿಂದ ತುಂಬಾ ಶಿಥಿಲಗೊಂಡು ಅದು ಬೀಳುವ ಪರಿಸ್ಥಿತಿಯಲ್ಲಿದೆ, ಹುಡುಗರೆಲ್ಲಾ ಕೂಡ ಹೊರಗಡೆ ಇದ್ದಾರೆ. ಅದಕ್ಕಾಗಿ ತತ್‌ಕ್ಷಣ ಇದಕ್ಕೆ ಬೇಕಾಗಿರುವ ರೂ. 45 ಲಕ್ಷಗಳ ಅನುಮೋದನೆಗೆ ಇಲಾಖೆಗೆ ಬಂದಿದೆ, ಇಲಾಖೆಯಿಂದ ಸ್ವಲ್ಪ ಹಣವನ್ನು ಕೊಟ್ಟರೆ 6 ತಿಂಗಳಲ್ಲಿ ರೂಫಿಂಗ್ ಹಾಕುವ ಕೆಲಸ ಮುಗಿದು ಕಟ್ಟಡ ಪೂರ್ಣವಾಗುತ್ತದೆ. ಪಿಲ್ಲರ್ಸ್, ವಾಲ್ಸ್ ಸೇರಿದಂತೆ ಎಲ್ಲವೂ ಆಗಿದೆ, ಹಾಗಾಗಿ ತತ್‌ಕ್ಷಣ ಇದಕ್ಕೆ ತಾವು ಹೆಚ್ಚಿನ ಒತ್ತನ್ನು ಕೊಡಬೇಕೆಂದು ಕೇಳುತ್ತೇನೆ.

**ಶ್ರೀ ಬಿ.ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :–** ತಾವು ಹೇಳಿದಂತೆ ಅರ್ಧಕ್ಕೆ ನಿಂತಿರುವ ಕಾಮಗಾರಿ ಹಾಗೇ ನಿಂತರೆ ಸಾಕಷ್ಟು ಹಣ ಖರ್ಚು ಮಾಡಬೇಕಾಗುತ್ತದೆ, ತಕ್ಷಣವೇ ಇದಕ್ಕೆ ಹಣವನ್ನು ಬಿಡುಗಡೆ ಮಾಡಿ, ಅದನ್ನು ಪೂರ್ತಿಗೊಳಿಸುವ ಕೆಲಸವನ್ನು ಮಾಡುತ್ತೇವೆ.

ಊ) <u>ವಿಷಯ :– ಬೆಳಗಾವಿ ನಗರದಲ್ಲಿ ವಿಶ್ವಕನ್ನಡ ಸಮ್ಮೇಳನ ನಡೆಸುತ್ತಿರುವುದರಲ್ಲಿ ಆಗುತ್ತಿರುವ ವಿಳಂಬದ ಬಗ್ಗೆ :</u>

**ಶ್ರೀ ವಾಟಾಳ್ ನಾಗರಾಜ್ :–** ಬೆಳಗಾವಿ ನಗರದಲ್ಲಿ ವಿಶ್ವ ಕನ್ನಡ ಸಮ್ಮೇಳನ ನಡೆಸುತ್ತೇವೆಂದು ಭರವಸೆಯನ್ನು ನೀಡಿ, ಈ ಸಮ್ಮೇಳನ ನಡೆಸುವ ಬಗ್ಗೆ ಸರ್ಕಾರಕ್ಕೆ ಸ್ಪಷ್ಟತೆ ಇಲ್ಲ. ಈಗಾಗಲೇ ಸುಮಾರು 4 ಬಾರಿ ಮುಂದೂಡಲಾಗಿದೆ, ಜೊತೆಗೆ ಅದಕ್ಕೆ ಒದಗಿಸಿರುವ ಹಣವನ್ನು ಕೂಡ ಹಿಂದಕ್ಕೆ ಪಡೆಯಲಾಗಿದೆ ಎಂಬ ವಿಚಾರವು ಇದೆ. ಯಾವಾಗ ಈ ಸಮ್ಮೇಳನವನ್ನು ಕರೆಯಿಸುತ್ತೀರಿ, ಎಲ್ಲಿ ಕರೆಯುತ್ತೀರೆಂಬುದು ಬಹಳ ಸ್ಪಷ್ಟವಾಗಬೇಕು. ವಿಶ್ವಕನ್ನಡ ಸಮ್ಮೇಳನದ ಬಗ್ಗೆ ಏನೇನು ಕಾರ್ಯಕ್ರಮಗಳು ರೂಪಿತವಾಗಿವೆ. ಆ ವಿಶ್ವಕನ್ನಡ ಸಮ್ಮೇಳನ ನಡೆಯುವ ಸ್ಥಳಕ್ಕೆ ಹಿರಿಯ ಕರ್ನಾಟಕ

ಏಕೀಕರಣ ಧುರೀಣರಾದ ಶ್ರೀಮಾನ್ ನಿಜಲಿಂಗಪ್ಪನವರ ಹೆಸರಿಡಬೇಕೆಂದು ಹಿಂದೆಯೇ ನಾನು ಇಲ್ಲಿ ಒತ್ತಾಯ ಮಾಡಿದ್ದೇನೆ.

**(1 : 00 ಘಂಟೆ)**

ಇದರ ಬಗ್ಗೆ ಸರ್ಕಾರಕ್ಕೆ ಗಮನ ಇಲ್ಲ. ಇದರ ಜೊತೆ ಈ ಒಂದು ಜಾನಪದ ಜಾತ್ರೆ ಮತ್ತು ನಮ್ಮ ವಿಶ್ವ ಕನ್ನಡ ಸಮ್ಮೇಳನ ಇದು ಅದು ಒಂದೇ. ಜಾನಪದ ಜಾತ್ರೆ ಸೇರಿದರೆ ಮುಗಿದು ಹೋಯಿತು. ಈ ಮಧ್ಯೆ ಜಾನಪದ ಜಾತ್ರೆಯನ್ನು ನಿಲ್ಲಿಸಿಬಿಟ್ಟಿರಿ. ಹಳ್ಳಿ ಹಳ್ಳಿ ಮತ್ತು ಗ್ರಾಮೀಣ ಪ್ರದೇಶದ ಕಲಾವಿದರಿಗೆ ಒಂದು ಉತ್ತೇಜನ ಇತ್ತು. ಗ್ರಾಮೀಣ ಪ್ರದೇಶದ ಈ ಜಾನಪದ ಕಲಾವಿದರಿಗೆಲ್ಲ ಮೋಸವಾಗಿದೆ. ಅದನ್ನು ಹೊಡೆದು ಲೂಟಿ ಮಾಡಿ ತಿಂದವರ್‍ಯಾರೋ, ವ್ಯವಸ್ಥೆ ಮಾಡಿದವರು ಯಾರೋ, ಗ್ರಾಮೀಣ ಪ್ರದೇಶದ ಕಲಾವಿದರಿಗೆ ನಿರಂತರವಾಗಿ ಅನ್ಯಾಯವಾಗಿದೆ. ಅದರ ಬಗ್ಗೆ ಸಮಗ್ರವಾಗಿ ತನಿಖೆ ಆಗಬೇಕಾಗುತ್ತದೆ.

ಗ್ರಾಮೀಣ ಪ್ರದೇಶಗಳಿಗೆ ಸರ್ಕಾರದವರು ಹೊಸ ರೂಪ ಕೊಟ್ಟರು. ಶಕ್ತಿ ಕೊಟ್ಟರು ಸಂತೋಷ. ಮೊದಲು ವಿಧಾನಸೌಧದ ಮುಂದೆ ಆರಂಭವಾಯಿತು. ನಂತರ ವಿಧಾನಸೌಧ ಬಿಟ್ಟು ಲಾಲ್‌ಬಾಗ್‌ಗೆ ಹೋಯಿತು. ಇಲ್ಲಿಂದ ಜಿಲ್ಲೆಗಳಲ್ಲಿ ಪ್ರಾರಂಭ ಮಾಡಿದಿರಿ. ಜಾನಪದ ಕಲಾವಿದರನ್ನು ಒಂದು ಹೊಸ ದಿಕ್ಕಿನಲ್ಲಿ ಕರೆದು ಗೌರವ ಕೊಡತಕ್ಕಂತಹ ಸೂಚನೆ ಆಯಿತು. ಬಹಳ ಸಂತೋಷ. ಚಾಮರಾಜನಗರದಲ್ಲಿಯೂ ಮಾನ್ಯ ಸಚಿವರು ಜಾನಪದ ಜಾತ್ರೆ ಮಾಡಿಸುತ್ತಾರೆ. ಈಗ ಅವರು ದಿಕ್ಕಾಪಾಲಾಗಿ ಹೋಗಿದ್ದಾರೆ. ಅವರಿಗೆ ಸರಿಯಾದ ರೀತಿಯಲ್ಲಿ ಹಣ ದೊರಕಿಲ್ಲ. ಆದರೆ ಕೋಟ್ಯಾಂತರ ರೂಪಾಯಿ ಮಾತ್ರ ಖರ್ಚಾಗಿರುವುದು ಸರ್ಕಾರದ ಹೆಸರಿನಲ್ಲಿದೆ. ಇದೆಲ್ಲದಕ್ಕೂ ಒಬ್ಬರೇ ಒಬ್ಬ ಅಧಿಕಾರಿಯನ್ನು ನೇಮಿಸಿಬಿಟ್ಟಿದ್ದೀರಿ. ಕರ್ನಾಟಕ ಏಕೀಕರಣಕ್ಕೂ ಅವರೇ, ಸುವರ್ಣ ಕರ್ನಾಟಕಕ್ಕೂ ಅವರೇ, ವಿಶ್ವ ಕನ್ನಡ ಸಮ್ಮೇಳನಕ್ಕೂ ಅವರೇ, ಎಲ್ಲದಕ್ಕೂ ಒಬ್ಬರೇ ಅಧಿಕಾರಿ. ಅವರು ಅವರ ಇಚ್ಛೆ ಬಂದ ಮಾಡುತ್ತಿದ್ದಾರೆ. ಬೇಡಿಕೆ ಮೇಲೆ ಮಾತನಾಡುವಾಗ ನಾನು ಇದರ ಬಗ್ಗೆ ಸಮಗ್ರವಾಗಿ ಮಾತನಾಡುತ್ತೇನೆ. ಇದು ವಿಶ್ವ ಕನ್ನಡ ಸಮ್ಮೇಳನದ ಬಗ್ಗೆ ಸ್ಪಷ್ಟತೆ ಮತ್ತು ಜಾನಪದ ಕಲಾವಿದರ ಬಗ್ಗೆ ಏನು ಮಾಡಬೇಕೆಂದು ತಾವು ಹೇಳಬೇಕು.

ಶ್ರೀ ಹೆಚ್.ಎಸ್. ಮಹಾದೇವಪ್ರಸಾದ್ :– ಮಾನ್ಯ ಅಧ್ಯಕ್ಷರೆ, ವಿಶ್ವ ಕನ್ನಡ ಸಮ್ಮೇಳನ ಫೆಬ್ರುವರಿ 23, 24 ಮತ್ತು 25 ನೇ ತಾರೀಖಿನಂದು ನಡೆಸಬೇಕೆಂದು ಸರ್ಕಾರ ಹಿಂದೆ ತೀರ್ಮಾನ ತೆಗೆದುಕೊಂಡಿತ್ತು. ಅದಕ್ಕೆ ಬೇಕಾದಂತಹ ಸಿದ್ಧತೆಗಳನ್ನು ಮಾಡುವಂತಹ ಕೆಲಸ ಪ್ರಾರಂಭವಾಗಿತ್ತು. ಮಾನ್ಯ ರಾಷ್ಟ್ರಪತಿಗಳನ್ನು ಕೂಡ ಆ ಒಂದು ಮುಕ್ತಾಯ ಸಮಾರಂಭಕ್ಕೆ ಆಹ್ವಾನಿಸಿ ಅವರು ತಮ್ಮ ಒಪ್ಪಿಗೆಯನ್ನು ಕೂಡ ಸೂಚಿಸಿದ್ದರು. ಅದೇ ಸಂದರ್ಭದಲ್ಲಿ ಕಾವೇರಿ ನ್ಯಾಯ ಮಂಡಳಿಯ ಒಂದು ತೀರ್ಪು ಹೊರ ಬಿದ್ದಂತಹ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಈ ಸಂದರ್ಭದಲ್ಲಿ ಈ ಸಮ್ಮೇಳನ ಮಾಡುವುದು ಸೂಕ್ತವಲ್ಲವೆಂದು ಹೇಳಿ ಅದನ್ನು ಸ್ವಲ್ಪ ದಿನಗಳ ಕಾಲ ಮುಂದೂಡಬೇಕೆಂದು ಹೇಳಿ ತೀರ್ಮಾನ ತೆಗೆದುಕೊಂಡಿದ್ದರು. ಅಲ್ಲಿಂದ ಸೆಪ್ಟೆಂಬರ್ ಕೊನೆಯ ವಾರದಲ್ಲಿ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಡೆದಂತಹ ಒಂದು ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ. ಸೆಪ್ಟೆಂಬರ್ ಕೊನೆಯ ವಾರದಲ್ಲಿ ನಾವು ವಿಶ್ವಕನ್ನಡ ಸಮ್ಮೇಳನ ಮಾಡತಕ್ಕಂತಹ ಕೆಲಸವನ್ನು ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ. ಇದಕ್ಕಾಗಿ ಸುಮಾರು 9 ಕೋಟಿ ರೂಪಾಯಿಗಳನ್ನು ಹಿಂದಿನ ಆರ್ಥಿಕ ವರ್ಷದ ಅವಧಿಯಲ್ಲಿ ಸರ್ಕಾರ ಮಂಜೂರು ಮಾಡಿತ್ತು. ಅದನ್ನು ಈ ವರ್ಷ ಕೂಡ ಮುಂದುವರೆಸುವುದಕ್ಕೆ ಆರ್ಥಿಕ ಇಲಾಖೆ ಅನುಮತಿ ಕೊಟ್ಟಿದೆ. ಹಣ ನಮ್ಮ ಇಲಾಖೆಯ ವಶದಲ್ಲಿದೆ.

ಅದನ್ನು ನಾವು ಸಮ್ಮೇಳನ ಮಾಡುವಂತಹ ಸಂದರ್ಭದಲ್ಲಿ ವಿವಿಧ ಕಾರ್ಯಕ್ರಮಗಳ ಸಮಿತಿಗಳನ್ನು ರಚನೆ ಮಾಡಿದ್ದೇವೆ. ಅವುಗಳಿಗೆ ಯಾವ್ಯಾವ ಕಾರ್ಯಕ್ರಮಗಳಿಗೆ ಯಾವ ರೀತಿ ಖರ್ಚು ಮಾಡಬೇಕು ಎನ್ನುವುದನ್ನು ನಿರ್ಧರಿಸಿ ಅದರಂತೆ ವಿಶ್ವ ಕನ್ನಡ ಸಮ್ಮೇಳನ ಸೆಪ್ಟೆಂಬರ್ ತಿಂಗಳಲ್ಲಿ ಮಾಡಲಾಗುತ್ತದೆ. ಜಾನಪದ ಜಾತ್ರೆ ಕಾರ್ಯಕ್ರಮದ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈ ಅಭಿವೃದ್ಧಿ ರಂಗದ ಸರ್ಕಾರ ರಚನೆ ಆದ ಮೇಲೆ ಮಾನ್ಯ ಮುಖ್ಯ ಮಂತ್ರಿಗಳ ವಿಶೇಷ ಕಾಳಜಿಯಿಂದ ಜಾನಪದ ಜಾತ್ರೆ ಸುವರ್ಣ ಕರ್ನಾಟಕ ವರ್ಷದಲ್ಲಿ ರಾಜ್ಯಾದ್ಯಂತ ಆಚರಣೆ ಆಗಬೇಕು. ಬೆಂಗಳೂರಿನಲ್ಲಿ ಪ್ರತಿ 15 ದಿನಗಳಿಗೊಮ್ಮೆ ಎರಡು ದಿನಗಳ ಕಾಲ ಲಾಲ್‌ಬಾಗ್‌ನಲ್ಲಿ ನಡೆಯಬೇಕೆಂಬ ಉದ್ದೇಶದಿಂದ ಈ ಒಂದು ಜಾನಪದ ಜಾತ್ರೆ ಕಾರ್ಯಕ್ರಮ ಪ್ರಾರಂಭಿಸಲಾಗಿತ್ತು. ಇದುವರೆಗೆ ಸುಮಾರು 34 ಕಾರ್ಯಕ್ರಮಗಳು ನಡದಿವೆ. ಅದರಲ್ಲಿ 32 ಕಾರ್ಯಕ್ರಮಗಳು ಬೆಂಗಳೂರಿನಲ್ಲಿ, ಮತ್ತು ಬೆಂಗಳೂರಿನ ಹೊರಗಡೆ ಚಾಮರಾಜನಗರ ಮತ್ತು ರಾಮನಗರಗಳಲ್ಲಿ ಒಂದೊಂದು ಜಾನಪದ ಜಾತ್ರೆ ಕಾರ್ಯಕ್ರಮವಾಗಿದೆ.

ಜಿಲ್ಲಾ ಮಟ್ಟದಲ್ಲಿ ಹಾಗೂ ಪ್ರವಾಸಿ ಕೇಂದ್ರಗಳಲ್ಲಿ ಆಯಾ ಜಿಲ್ಲೆಯ ಜಿಲ್ಲಾ ಕೇಂದ್ರಗಳಲ್ಲಿ ಮತ್ತು ಆ ಜಿಲ್ಲೆಯ ಯಾವುದಾದರೂ ಒಂದು ಪ್ರವಾಸಿ ಕೇಂದ್ರದಲ್ಲಿ ಒಂದು ಕಡೆ ಎಂದು ಹೇಳಿ ತಿಂಗಳಲ್ಲಿ ಎರಡು ಕಾರ್ಯಕ್ರಮಗಳನ್ನು ಮಾಡತಕ್ಕಂತಹ ಕಾರ್ಯಕ್ರಮ ರಾಜ್ಯಾದ್ಯಂತ ನಡೆದಿದೆ. ಇದಕ್ಕಾಗಿ ಸುಮಾರು 4 ಕೋಟಿ 84 ಲಕ್ಷ ರೂಪಾಯಿಗಳು ಇದುವರೆಗೆ ಖರ್ಚಾಗಿದೆ. ಇದರಲ್ಲಿ ಬೆಂಗಳೂರಿನಲ್ಲಿ ನಡೆದಂತಹ ಕಾರ್ಯಕ್ರಮಗಳಲ್ಲಿ ಸುಮಾರು 3713 ಜಾನಪದ ಕಲಾವಿದರು ಇದರಲ್ಲಿ ಭಾಗವಹಿಸಿದ್ದಾರೆ. ಅವರಿಗೆಲ್ಲಾ ಸಂಭಾವನೆ ಮತ್ತು ಪ್ರವಾಸ ಭತ್ಯೆ ಇವೆಲ್ಲಾ ಕೊಟ್ಟು ಕಾರ್ಯಕ್ರಮಗಳನ್ನು ಮಾಡಲಾಗಿದೆ. ಇದರ ಉದ್ದೇಶ ರಾಜ್ಯಾದ್ಯಂತ ಗ್ರಾಮೀಣ ಭಾಗಗಳಲ್ಲಿರತಕ್ಕಂತಹ ಎಲ್ಲ ಜಾನಪದ ಕಲಾವಿದರಿಗೆ ಅವರ ಕಲೆಯನ್ನು ಪ್ರದರ್ಶನ ಮಾಡುವುದಕ್ಕೆ ಅವಕಾಶ ಮಾಡಿಕೊಡುವಂಥಾದ್ದು ಮತ್ತು ಬೆಂಗಳೂರಿನಂತಹ ನಗರ ಪ್ರದೇಶದ ಜನರಿಗೂ ಈ ಜಾನಪದ ಪ್ರಕಾರಗಳನ್ನು ಪ್ರದರ್ಶನ ಮಾಡಿ ಅವರಿಗೆ ತೋರಿಸತಕ್ಕಂತಹ ಕೆಲಸ. ಇವೆರಡೂ ಕೆಲಸಗಳನ್ನು ಬಹಳ ಯಶಸ್ವಿಯಾದ ರೀತಿಯಲ್ಲಿ ನಮ್ಮ ಇಲಾಖೆಯ ವತಿಯಿಂದ ಮಾಡಿಕೊಂಡು ಬಂದಿದ್ದೇವೆ. ಈಗ ಮಳೆಗಾಲ ಇರುವುದರಿಂದ ಈ ಕಾರ್ಯಕ್ರಮಕ್ಕೆ ನಾವು ತಾತ್ಕಾಲಿಕವಾಗಿ ತಡೆಯನ್ನು ನೀಡಲಾಗಿದೆ. ಈ ಆರ್ಥಿಕ ವರ್ಷದಲ್ಲಿ ಅದಕ್ಕೆ ಸುವರ್ಣ ಕರ್ನಾಟಕ ಆಚರಣೆಗೆ ಅನುದಾನ ಬೇಡಿಕೆಯನ್ನು ಹಣಕಾಸು ಇಲಾಖೆಗೆ ಸಲ್ಲಿಸಲಾಗಿದೆ. ಹಣ ಮಂಜೂರಾದ ನಂತರ ಮತ್ತೆ ಸೆಪ್ಟೆಂಬರ್ ತಿಂಗಳಿನಿಂದ ಮುಂದುವರೆಸುವಂತಹ ಆಲೋಚನೆ ಸರ್ಕಾರಕ್ಕೆ ಇದೆ.

**ಶ್ರೀ ವಾಟಾಳ್ ನಾಗರಾಜ್** :– ಮಾನ್ಯ ಅಧ್ಯಕ್ಷರೆ, ಸಂತೋಷ. ಕಲಾವಿದರಿಗೆ ಸಂಪೂರ್ಣ ಅನ್ಯಾಯವಾಗಿದೆ ಎನ್ನುವುದನ್ನು ತಮಗೆ ತಿಳಿಸಿದೆ.

**ಅಧ್ಯಕ್ಷರು** :– ವಾಟಾಳ್ ನಾಗರಾಜ್‌ರವರೇ ಚರ್ಚೆಗೆ ಅವಕಾಶವಿಲ್ಲ. ಅವರು ಹೇಳಿದ್ದಾರೆ ಕುಳಿತುಕೊಳ್ಳಿ. ಬೇರೆ ಸಮಯದಲ್ಲಿ ಪ್ರಸ್ತಾಪ ಮಾಡುತ್ತೇನೆಂದು ಹೇಳಿದಿರಿ.

**ಶ್ರೀ ವಾಟಾಳ್ ನಾಗರಾಜ್** :– ವಿಶ್ವ ಕನ್ನಡ ಸಮ್ಮೇಳನ ಮಾಡುವುದಕ್ಕೆ ಮುಂಚೆ ಅಲ್ಲಿ ಮರಾಠಿ ವಿಶ್ವ ಸಮ್ಮೇಳನ ಮಾಡುವುದಕ್ಕೆ ಹೊರಟಿದ್ದಾರೆ. ನೀವು ಅದರ ಬಗ್ಗೆ ಎಚ್ಚರ ವಹಿಸಿ. ಅದು ಅಲ್ಲಿ ಆಗಕೂಡದು. ಅಲ್ಲಿ ವಿಶ್ವ ಕನ್ನಡ ಸಮ್ಮೇಳನ ಆದರೆ ಅಲ್ಲಿ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದು ಒಂದು. ಎರಡನೆಯದು ನೀವು ಹೇಳಬೇಕಾಗಿತ್ತು. ಜಾನಪದ ಜಾತ್ರೆ ಏನಾಗಿದೆ,

ಕಲಾವಿದರಿಗೆ ಏನಾಗಿದೆ, ಬೇರೆಯವರಿಗೆ ಏನಾಗಿದೆ, ಆಗಿರತಕ್ಕಂತಹ ನಷ್ಟ ಇದರ ಬಗ್ಗೆ ತಾವು ಹೇಳಲೇ ಇಲ್ಲ.

**ಅಧ್ಯಕ್ಷರು :–** ಚರ್ಚೆಗೆ ಅವಕಾಶವಿಲ್ಲ. ನಿಮ್ಮ ಅಭಿಪ್ರಾಯ ಹೇಳಬೇಕಾಗಿತ್ತು ಹೇಳಿದ್ದೀರಿ. ಸಾಕು ಇನ್ನೇನು ಹೇಳುತ್ತಾರೆ ಅವರು ಅಷ್ಟೇ ಹೇಳುವುದು.

**ಶ್ರೀ ಹೆಚ್.ಎಸ್. ಮಹದೇವಪ್ರಸಾದ್ :–** ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಕೂಡ ಇವತ್ತು ನಾಳೆ ವಿಶ್ವ ಕನ್ನಡ ಸಮ್ಮೇಳನ ನಡೆಸುವುದರ ಬಗ್ಗೆ ಒಂದು ಪೂರ್ವಭಾವಿ ಸಭೆಯನ್ನು ಕರೆಯುವುದಕ್ಕೆ ಸೂಚನೆ ನೀಡಿದ್ದಾರೆ. ಆ ಸಭೆಯಲ್ಲಿ ದಿನಾಂಕವನ್ನು ನಿಗಧಿಪಡಿಸಿ ಶೀಘ್ರದಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ಆಯೋಜಿಸಲಾಗುತ್ತದೆ. ಮರಾಠಿ ಸಮ್ಮೇಳನ ನಡೆಸುವ ವಿಚಾರ ಇದುವರೆಗೆ ಸರ್ಕಾರದ ಗಮನಕ್ಕೆ ಬಂದಿಲ್ಲ. ಪತ್ರಿಕೆಗಳಲ್ಲಿ ಬಂದಿದೆ. ಅದು ನಮಗೆ ಸಂಬಂಧಪಟ್ಟ ವಿಚಾರ ಅಲ್ಲ. ಆದರೂ ಕೂಡ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಜಾನಪದ ಜಾತ್ರೆಯ ವಿಚಾರದಲ್ಲಿ ಒಂದು ವಿವರವಾದ ಹೇಳಿಕೆಯನ್ನು ನಾನು ಸಧ್ಯದಲ್ಲಿಯೇ ಸದನಕ್ಕೆ ಕೊಡುವುದಕ್ಕೆ ಬಯಸುತ್ತೇನೆ.

ಖ) **ವಿಷಯ :–** <u>ಶ್ರೀನಿವಾಸಪುರದಲ್ಲಿ ವೃದ್ಧಾಪ್ಯವೇತನ, ಅಂಗವಿಕಲರ ವೇತನ, ವಿಧವಾ ವೇತನ ಪಾವತಿ ಮಾಡಲು ಏರ್ಪಾಡು ಮಾಡುವ ಬಗ್ಗೆ :–</u>

**ಶ್ರೀ ಕೆ.ಆರ್. ರಮೇಶ್ ಕುಮಾರ್ :–** ಮಾನ್ಯ ಅಧ್ಯಕ್ಷರೆ, ಮೊನ್ನೆ ಬಜೆಟ್ ಮಂಡನೆ ಆದ ಮೇಲೆ ವೃದ್ಧಾಪ್ಯ ವೇತನ, ಅಂಗವಿಕಲರಿಗೆ ಕೊಡತಕ್ಕಂತಹ ವೇತನ ಇವನ್ನೆಲ್ಲಾ ಹೆಚ್ಚಳ ಮಾಡಿದರು. ಇದು ಬಹಳ ಶ್ಲಾಘನೀಯವಾದ ಕೆಲಸ. ಅದಾದ ಮೇಲೆ ನಾವು ನಮ್ಮ ಜಿಲ್ಲಾ ಮಂತ್ರಿಗಳಾದ ಶ್ರೀಮಾನ್ ಶ್ರೀನಿವಾಸ್‌ರವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ತಾಲ್ಲೂಕಿನಾದ್ಯಂತ ಒಂದು ವ್ಯವಸ್ಥೆ ಮಾಡಿದೆವು. ಅಧಿಕಾರಿಗಳ ಜೊತೆ ಸಭೆ ಮಾಡಿ, ಪ್ರತಿ ಊರಿನಲ್ಲಿ ಅಲ್ಲಿಯ ಜನರನ್ನು ಸೇರಿಸಿ ಅದರ ಬಗ್ಗೆ ಪ್ರಚಾರ ಮಾಡುವಂಥಾದ್ದು, ಯಾರ್ಯಾರು ಅರ್ಹ ಅಭ್ಯರ್ಥಿಗಳಿದ್ದಾರೆ ಅವರೆಲ್ಲಾ ಅರ್ಜಿಗಳನ್ನು ಸಲ್ಲಿಸಬೇಕು. ಏಕೆಂದರೆ, ಈ ಅಧಿಕಾರಿಗಳು ಸಾಕಷ್ಟು ಶ್ರದ್ಧೆ ವಹಿಸುತ್ತಿರಲಿಲ್ಲ. ಇಡೀ ತಾಲ್ಲೂಕಿನಲ್ಲಿ 10 ಕಡೆ ಸೆಂಟರ್ಸ್ ಎಂದು ಮಾಡಿ ಡಾಕ್ಟರ್ಸ್ ಎಲ್ಲಾ ಅಲ್ಲಿಗೇ ಕರೆಸಿ ಅವರು ಪಾಪ ವಯಸ್ಸಾಗಿರುತ್ತದೆ,